159ನೇ ಅಧಿವೇಶನ ಶೂ.ವೇ.ಸಂಖ್ಯೆ:-17 ದಿ:-೨೦-೦೮-೨೬

**ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸರ್ಕಾರದ ಉತ್ತರ:**

**:ಪ್ರಶ್ನೆ:**

ದಿನಾಂಕ: 19.08.2026ರಂದು 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ 'ಮರಳಿ ಬಾರದ ಪಾಲಿಟೆಕ್ನಿಕ್ ಕಾಲೇಜು' ಎಂಬ ಶೀರ್ಷಿಕೆಯಡಿ, ರಾಯಚೂರು ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಕಾಲೇಜುಗಳಿರುವ ಸಿಂಧನೂರಿನಲ್ಲಿ ಒಂದೂ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಇಲ್ಲವಾಗಿದೆ. 2018ರಲ್ಲಿ ಮಂಜೂರಾಗಿದ್ದ ಕಾಲೇಜನ್ನು ಬೇರೆಡೆ ಎತ್ತಂಗಡಿ ಮಾಡಿದ್ದ ಸರ್ಕಾರ ಬಳಿಕ ಮರು ಮಂಜೂರಿಗೆ ನಿರಾಸಕ್ತಿ ವಹಿಸಿರುವುದು ಶೈಕ್ಷಣಿಕ ಪ್ರಗತಿಯ ಹಿನ್ನಡೆಗೆ ಕಾರಣವಾಗಿದೆ. ಸಿಂಧನೂರು ತಾಲ್ಲೂಕಿನಲ್ಲಿ ಸರ್ಕಾರಿ ಹಾಗೂ ಖಾಸಗೀ ಪದವಿ ಪೂರ್ವ ಕಾಲೇಜು, ಪದವಿ ಕಾಲೇಜು, ಸ್ನಾತಕೋತ್ತರ ಪದವಿ ಕಾಲೇಜುಗಳು 50ಕ್ಕೂ ಅಧಿಕ ಸಂಖ್ಯೆಯಲ್ಲಿ ಇದ್ದರೂ, ತಾಂತ್ರಿಕ ಶಿಕ್ಷಣಕ್ಕೆ ಬೇಕಾದ ಒಂದೂ ಕಾಲೇಜು ಇಲ್ಲಿಲ್ಲ. ಪ್ರತೀ ವರ್ಷ 'ಎಸ್‌ಎಸ್‌ಎಲ್‌ಸಿ'ಯಲ್ಲಿ 4 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಿದ್ದರೂ, ಬಹುತೇಕರು ತಾಂತ್ರಿಕ ಶಿಕ್ಷಣಕ್ಕಾಗಿ ಹೊರ ತಾಲ್ಲೂಕು ಹಾಗೂ ಜಿಲ್ಲೆಗಳಿಗೆ ತೆರಳುವ ಅನಿವಾರ್ಯತೆ ಇದೆ.

2017-18ರಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದ ಅವಧಿಯಲ್ಲಿ, ಗ್ರಾಮೀಣ ಪ್ರದೇಶದ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪಡೆಯುವುದಕ್ಕೆ ಉತ್ತೇಜನ ನೀಡಲು ಗ್ರಾಮೀಣ ಪ್ರದೇಶದಲ್ಲಿ ಹೊಸದಾಗಿ 25 ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಮಂಜೂರು ಮಾಡಲಾಗಿತ್ತು. ಆ ಪೈಕಿ ಸಿಂಧನೂರಿಗೂ ಕಾಲೇಜು ಮಂಜೂರಾಗಿತ್ತು. ಆದರೆ ಕಾಲೇಜು ನಿರ್ಮಾಣಕ್ಕೆ ಸೂಕ್ತ ಸ್ಥಳ ದೊರೆಯದ ಕಾರಣ, ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಸಿಂಧನೂರಿನಿಂದ ಬೇರೆ ಜಿಲ್ಲೆಗೆ ಕಾಲೇಜನ್ನು ಸ್ಥಳಾಂತರ ಮಾಡಿತು. ಇದಾಗಿ ವರ್ಷಗಳೇ ಕಳೆದರೂ, ತಾಂತ್ರಿಕ ಶಿಕ್ಷಣಕ್ಕೆ ಉತ್ತೇಜನ ನೀಡುವ ಕೆಲಸವಾಗಿಲ್ಲ. ಸ್ಥಳೀಯವಾಗಿ ಇರುವ ಖಾಸಗೀ ಶಿಕ್ಷಣ ಸಂಸ್ಥೆಗಳಲ್ಲಿ ಐಟಿಐ ಶಿಕ್ಷಣ ಸಿಗುತ್ತಿದೆಯೇ ಹೊರತು, ಪಾಲಿಟೆಕ್ನಿಕ್ ಕಾಲೇಜುಗಳು ಇಲ್ಲವಾಗಿದೆ ಎಂದು ವರದಿಯಾಗಿರುತ್ತದೆ.

ಆದುದರಿಂದ, ಇಡೀ ಕಲ್ಯಾಣ ಕರ್ನಾಟಕ ಭಾಗದಲ್ಲೇ ಅತೀ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಹಾಗೂ ಶೈಕ್ಷಣಿಕವಾಗಿ ಮುಂದುವರೆಯುತ್ತಿರುವ ಸಿಂಧನೂರು ತಾಲ್ಲೂಕು ಸಂಪೂರ್ಣವಾಗಿ ತಾಂತ್ರಿಕ ಶಿಕ್ಷಣದಿಂದ ವಂಚಿತವಾಗಿದ್ದು, ಸರ್ಕಾರ ಕೂಡಲೇ ಸಿಂಧನೂರು ತಾಲ್ಲೂಕಿಗೆ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡುವ ಕುರಿತು.

**:ಉತ್ತರ:**

ಸರ್ಕಾರಿ ಆದೇಶ ಸಂಖ್ಯೆ: ಇಡಿ 75 ಹೆಚ್‌ಪಿಯು 2017, ದಿ: 09-08-2017ರಲ್ಲಿ 2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಗ್ರಾಮೀಣ ಹಿಂದುಳಿದ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ತಾಂತ್ರಿಕ ಶಿಕ್ಷಣ ಪಡೆಯುವುದಕ್ಕೆ 25 ಹೊಸ ಸರ್ಕಾರಿ ಪಾಲಿಟೆಕ್ನಿಕ್ ನ್ನು ಪ್ರಾರಂಭಿಸಲು ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ಹೊಸ ಸರ್ಕಾರಿ ಪಾಲಿಟೆಕ್ನಿಕ್ ನ್ನು ಪ್ರಾರಂಭಿಸಲು ಆದೇಶಿಸಲಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 108 ಹೆಚ್‌ಪಿಟಿ 2022, ದಿ: 27-01-2023ರಲ್ಲಿ 2017-18ನೇ ಸಾಲಿನಲ್ಲಿ 25 ಹೊಸ ಸರ್ಕಾರಿ ಪಾಲಿಟೆಕ್ನಿಕ್ ಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದ ಪಾಲಿಟೆಕ್ನಿಕ್ ಗಳ ಪೈಕಿ ರಾಯಚೂರು ಜಿಲ್ಲೆಯ ಸಿಂಧನೂರಿಗೆ ಮಂಜೂರಾದ ಪಾಲಿಟೆಕ್ನಿಕ್ ಸಂಸ್ಥೆಗೆ ಜಮೀನು ದೊರೆಯದ ಕಾರಣ ಸದರಿ ಸಂಸ್ಥೆಯನ್ನು ಬೆಳಗಾವಿ ಜಿಲ್ಲೆಯ ಕಾಗವಾಡ ಇಲ್ಲಿಗೆ ಸ್ಥಳಾಂತರಿಸಿ ಆದೇಶಿಸಲಾಗಿದೆ.

ಮುಂದುವರೆದು, ಇಂಜಿನಿಯರಿಂಗ್ ಕಾಲೇಜು/ ಪಾಲಿಟೆಕ್ನಿಕ್ ಗಳನ್ನು ಪ್ರಾರಂಭಿಸಲು ಎಐಸಿಟಿಇ ನವದೆಹಲಿಯವರ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ಸದರಿ ಎಐಸಿಟಿಇ ಮಾರ್ಗಸೂಚಿಗಳನ್ವಯ

ಪಾಲಿಟೆಕ್ನಿಕ್‌ಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ನಿಯಮಾನಸಾರ ಅವಶ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡು ಎಐಸಿಟಿಇ, ನವದೆಹಲಿಯವರಿಂದ ಅನುಮೋದನೆ ಪಡೆದು ಪ್ರಾರಂಭಿಸಬೇಕಾಗಿರುತ್ತದೆ.

ಎಐಸಿಟಿಇ ಪರಿಷ್ಕೃತ ಮಾರ್ಗಸೂಚಿಗಳನ್ವಯ, ಇಂಜಿನಿಯರಿಂಗ್ ಪ್ರೋಗ್ರಾಮ್ ನೀಡುವ **ಇಂಜಿನಿಯರಿಂಗ್ ಸಂಸ್ಥೆಗಳನ್ನು** ಸ್ಥಾಪಿಸಲು ಪ್ರತೀ ಪ್ರೋಗ್ರಾಮಿನ ಅವಧಿ ಹಾಗೂ ಅನುಮೋದಿತ ಪ್ರವೇಶಾತಿಯಂತೆ ಅವಶ್ಯವಿರುವ Built-Up Area ವನ್ನು ಲೆಕ್ಕಾಚಾರ ಮಾಡಿ ಅದರ ಆದಾರದ ಮೇಲೆ ಮತ್ತು ಸದರಿ ಪ್ರದೇಶದಲ್ಲಿ ನಿಗಧಿಯಾಗಿರುವ FSI/FAR ಮಾನದಂಡಗಳನ್ವಯ ಅವಶ್ಯವಿರುವಷ್ಟು ಜಮೀನನ್ನು ಒದಗಿಸಿಕೊಳ್ಳಬೇಕಾಗಿರುತ್ತದೆ.

ಪ್ರಸ್ತುತ ಚಾಲ್ತಿಯಲ್ಲಿರುವ ಎಐಸಿಟಿಇ ಮಾರ್ಗಸೂಚಿಯನ್ವಯ 2023-24 ನೇ ಸಾಲಿನಿಂದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 01 ಉದಯೋನ್ಮುಖ ಕೋರ್ಸ್ ಅನ್ನು ಒಳಗೊಂಡಂತೆ 04 ಕೋರ್ಸ್ ಗಳೊಂದಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

ಅದರಂತೆ, 4 ಕೋರ್ಸುಗಳೊಂದಿಗೆ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಲು ಅಂದಾಜು 5800.00 ಚದರ ಮೀಟರ್ ಗಳ Built-Up Area ದ ಅವಶ್ಯಕತೆ ಇರುತ್ತದೆ. ಇದಲ್ಲದೆ ಸಂಸ್ಥೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರುಗಳಿಗೆ ಹಾಸ್ಟಲ್ ಸೌಲಭ್ಯ, Vehicle Parking ಹಾಗೂ ಆಟದ ಮೈದಾನದ ಅವಶ್ಯಕತೆ ಇರುತ್ತದೆ. ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಂಡು ಇಂಜಿನಿಯರಿಂಗ್ ಸಂಸ್ಥೆಗಳನ್ನು ಸ್ಥಾಪಿಸಲು FSI/FAR ನ ಅನುಪಾತ 1:1 ರಂತೆ ಕನಿಷ್ಠ 2.5 ರಿಂದ 3 ಎಕರೆಯಷ್ಟು ಜಾಗದ ಅವಶ್ಯಕತೆ ಇರುತ್ತದೆ.

ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಲು ಈ ಕೆಳಕಂಡ ಮೂಲಭೂತ ಸೌಲಭ್ಯಗಳ ಹಾಗೂ ಅನುದಾನದ ಅಗತ್ಯವಿರುತ್ತದೆ.

| ಕ್ರ ಸಂ | ಅನಾವರ್ತ ಖರ್ಚಿನ ವಿವರ | ಒಟ್ಟು (ರೂ ಲಕ್ಷಗಳಲ್ಲಿ | ಅಂದಾಜು ಆವರ್ತಿತ ಖರ್ಚು (ಪ್ರತಿ ವರ್ಷ) | ಒಟ್ಟು (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಮುಖ್ಯ ಕಟ್ಟಡ | 5800.00 | ಸಿಬ್ಬಂದಿ ವೇತನ | 1046.00 |
| 2 | ಯಂತ್ರೋಪಕರಣಗಳ ಖರೀದಿ ವೆಚ್ಚ | 1000.00 | ನಿತ್ಯೋಪಯೋಗಿ ಸಾಮಗ್ರಿ | 5.00 |
| 3 | ಪೀಠೋಪಕರಣಗಳ ಖರೀದಿ ವೆಚ್ಚ | 200.00 | | |
| 4 | ಪುಸ್ತಕಗಳ ಖರೀದಿ ವೆಚ್ಚ | 20.00 | | |
| ಒಟ್ಟು | | 7020.00 | ಒಟ್ಟು | 1051.00 |

ಎಐಸಿಟಿಇ ನವದೆಹಲಿಯವರ 2022-23 ನೇ ಸಾಲಿನ ಮಾರ್ಗಸೂಚಿಯನ್ವಯ ಭೋಧಕರು ಮತ್ತು ವಿದ್ಯಾರ್ಥಿಗಳ ಅನುಪಾತ 1:20 ಆಗಿದ್ದು, ಭೋಧಕ: ಭೋಧಕೇತರ: ಆಡಳಿತ ಸಿಬ್ಬಂದಿ ಹುದ್ದೆಗಳನ್ನು 1:1:0.78 ಅನುಪಾತದಂತೆ ಸೃಜಿಸಬೇಕಾಗಿರುತ್ತದೆ. ಇದರಂತೆ ಅವಶ್ಯವಿರುವ ಭೋಧಕ, ಭೋಧಕೇತರ ಮತ್ತು ಆಡಳಿತ ಸಿಬ್ಬಂದಿ ವಿವರವು ಈ ಕೆಳಗಿನ ಕೋಷ್ಟಕದಲ್ಲಿರುವಂತಿದೆ.

| ಕ್ರ ಸಂ | ಹುದ್ದೆ | ಹುದ್ದೆಗಳ ಸಂಖ್ಯೆ |
|---|---|---|
| 1 | ಭೋಧಕರು | 48 |
| 2 | ಭೋಧಕೇತರ ಸಿಬ್ಬಂದಿ | 48 |
| 3 | ಆಡಳಿತ ಸಿಬ್ಬಂದಿ | 38 |
| | ಒಟ್ಟು | 134 |

ಮುಂದುವರೆದು, 4 ಕೋರ್ಸುಗಳೊಂದಿಗೆ **ಪಾಲಿಟೆಕ್ನಿಕ್** ಸಂಸ್ಥೆಯನ್ನು ಸ್ಥಾಪಿಸಲು ಅಂದಾಜು 5042.7 ಚದುರ ಮೀಟರ್ ಗಳ Built-Up Area ದ ಅವಶ್ಯಕತೆ ಇರುತ್ತದೆ. ಇದಲ್ಲದೆ ಸಂಸ್ಥೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರುಗಳಿಗೆ ಹಾಸ್ಟಲ್ ಸೌಲಭ್ಯ, Vehicle Parking ಹಾಗೂ ಆಟದ ಮೈದಾನದ ಅವಶ್ಯಕತೆ ಇರುತ್ತದೆ. ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಂಡು ಪಾಲಿಟೆಕ್ನಿಕ್ ಸಂಸ್ಥೆಗಳನ್ನು ಸ್ಥಾಪಿಸಲು FSI/FAR ನ ಅನುಪಾತ 1:1 ರಂತೆ ಕನಿಷ್ಠ 2.5 ರಿಂದ 3 ಎಕರೆಯಷ್ಟು ಜಾಗದ ಅವಶ್ಯಕತೆ ಇರುತ್ತದೆ.

ಪಾಲಿಟೆಕ್ನಿಕ್ ಸಂಸ್ಥೆಗಳನ್ನು ಸ್ಥಾಪಿಸಲು ಈ ಕೆಳಕಂಡ ಮೂಲಭೂತ ಸೌಲಭ್ಯಗಳ ಹಾಗೂ ಅನುದಾನದ ಅಗತ್ಯವಿರುತ್ತದೆ.

| ಕ್ರ ಸಂ | ಅನಾವರ್ತ ಖರ್ಚಿನ ವಿವರ | ಒಟ್ಟು (ರೂ ಲಕ್ಷಗಳಲ್ಲಿ | ಅಂದಾಜು ಆವರ್ತಿತ ಖರ್ಚು: (ಪ್ರತಿ ವರ್ಷ) | ಒಟ್ಟು (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಮುಖ್ಯ ಕಟ್ಟಡ | 1800.00 | ಸಿಬ್ಬಂದಿ ವೇತನ | 500.00 |
| 2 | ಯಂತ್ರೋಪಕರಣಗಳ ಖರೀದಿ ವೆಚ್ಚ | 400.00 | ನಿತ್ಯೋಪಯೋಗಿ ಸಾಮಗ್ರಿ | 5.00 |
| 3 | ಪೀಠೋಪಕರಣಗಳ ಖರೀದಿ ವೆಚ್ಚ | 100.00 | | |
| 4 | ಪುಸ್ತಕಗಳ ಖರೀದಿ ವೆಚ್ಚ | 20.00 | | |
| **ಒಟ್ಟು** | | **2320.00** | **ಒಟ್ಟು** | **406.00** |

ಎಐಸಿಟಿಇ ನವದೆಹಲಿಯವರ 2022-23 ನೇ ಸಾಲಿನ ಮಾರ್ಗಸೂಚಿಯನ್ವಯ ಭೋಧಕರು ಮತ್ತು ವಿದ್ಯಾರ್ಥಿಗಳ ಅನುಪಾತ 1:25 ಆಗಿದ್ದು, ಭೋಧಕ: ಭೋಧಕೇತರ: ಆಡಳಿತ ಸಿಬ್ಬಂದಿ ಹುದ್ದೆಗಳನ್ನು 1:1:0.78 ಅನುಪಾತದಂತೆ ಸೃಜಿಸಬೇಕಾಗಿರುತ್ತದೆ. ಇದರಂತೆ ಅವಶ್ಯವಿರುವ ಭೋಧಕ, ಭೋಧಕೇತರ ಮತ್ತು ಆಡಳಿತ ಸಿಬ್ಬಂದಿ ವಿವರವು ಈಕೆಳಗಿನ ಕೋಷ್ಟಕದಲ್ಲಿರುವಂತಿದೆ.

| ಕ್ರ ಸಂ | ಹುದ್ದೆ | ಹುದ್ದೆಗಳ ಸಂಖ್ಯೆ |
|---|---|---|
| 1 | ಭೋಧಕರು | 32 |
| 2 | ಭೋಧಕೇತರ ಸಿಬ್ಬಂದಿ | 32 |
| 3 | ಆಡಳಿತ ಸಿಬ್ಬಂದಿ | 25 |
| | **ಒಟ್ಟು** | **89** |

ಪ್ರಸ್ತುತ ಸಿಂಧನೂರು ತಾಲ್ಲೂಕಿಗೆ ಸಮೀಪದಲ್ಲಿ ಈ ಕೆಳಕಂಡ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ 2025-26ನೇ ಸಾಲಿನ ಪ್ರವೇಶಾತಿ ವಿವರಗಳು ಕೆಳಕಂಡಂತಿದೆ:

| ಕ್ರ.ಸಂ | ಸಂಸ್ಥೆಯ ಹೆಸರು | ದೂರ (ಕಿ.ಮೀ. ಗಳಲ್ಲಿ) | ಕೋರ್ಸು | ಅನುಮೋದಿತ ಪ್ರವೇಶಾತಿ | ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|
| 1. | ಸರ್ಕಾರಿ ಇಂಜಿನಿಯರಿಂಗ್ | 50 | 1. ಕಂಪ್ಯೂಟರ್ ಸೈನ್ಸ್ & | 60 | 63 |

| | | | | | |
|---|---|---|---|---|---|
| | ಕಾಲೇಜು, ಗಂಗಾವತಿ | | ಇಂಜಿನಿಯರಿಂಗ್ | | |
| | | | 2. ಸಿವಿಲ್ ಇಂಜಿನಿಯರಿಂಗ್ | 60 | 14 |
| | | | 3. ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ | 60 | 46 |
| | | | 4. ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 7 |
| | | | 5. ಎಲೆಕ್ಟ್ರೀಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 60 | 21 |
| 2 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ರಾಯಚೂರು | 90 | 1. ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ | 60 | 63 |
| | | | 2. ಸಿವಿಲ್ ಇಂಜಿನಿಯರಿಂಗ್ | 60 | 42 |
| | | | 3. ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ | 60 | 63 |
| | | | 4. ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 11 |
| 3 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ತಳಕಲ್ | 100 | 1. ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ | 60 | 63 |
| | | | 2. ಸಿವಿಲ್ ಇಂಜಿನಿಯರಿಂಗ್ | 60 | 34 |
| | | | 3. ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ | 60 | 63 |
| | | | 4. ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 21 |
| | | | 5. ಎಲೆಕ್ಟ್ರೀಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 60 | 62 |
| | | | 2. ಸಿವಿಲ್ ಇಂಜಿನಿಯರಿಂಗ್ | 60 | 15 |
| | | | 3. ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ | 60 | 62 |
| | | | 4. ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 4 |
| 4 | ಸರ್ಕಾರಿ ಪಾಲಿಟೆಕ್ನಿಕ್, ಮಸ್ಕಿ | 25 | 1.ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ | 60 | 23 |
| | | | 2.ಎಲೆಕ್ಟ್ರೀಕಲ್ & ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ | 60 | 37 |
| | | | 3.ಸಿವಿಲ್ | 60 | 12 |

| | | | | | |
|---|---|---|---|---|---|
| | | | ಇಂಜಿನಿಯರಿಂಗ್ | | |
| | | | 4.ಕ್ಲೌಡ್ ಕಂಪ್ಯೂಟಿಂಗ್ | 60 | 0 |
| 5 | ಸರ್ಕಾರಿ ಪಾಲಿಟೆಕ್ನಿಕ್, ಕಾರಟಗಿ | 23 | 1.ಸಿವಿಲ್ ಇಂಜಿನಿಯರಿಂಗ್ | 60 | 62 |
| | | | 2.ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 63 |
| | | | 3.ಆಟೋಮೋಬೈಲ್ ಇಂಜಿನಿಯರಿಂಗ್ | 30 | 0 |
| | | | 4.ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ | 30 | 31 |
| 6 | ಸರ್ಕಾರಿ ಪಾಲಿಟೆಕ್ನಿಕ್, ಲಿಂಗಸಗೂರು | 56 | 1.ಸಿವಿಲ್ ಇಂಜಿನಿಯರಿಂಗ್ | 60 | 49 |
| | | | 2.ಮೆಕ್ಯಾನಿಕಲ್ ಇಂಜಿನಿಯರಿಂಗ್ | 60 | 37 |
| | | | 3.ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ | 60 | 53 |
| | | | 4.ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿನಿಯರಿಂಗ್ | 30 | 30 |
| | | | 5.ಆಟೋಮೋಬೈಲ್ ಇಂಜಿನಿಯರಿಂಗ್ | 30 | 11 |
| 7 | ಸರ್ಕಾರಿ ಪಾಲಿಟೆಕ್ನಿಕ್, ಕಂಪ್ಲಿ | 53 | 1.ಸಿವಿಲ್ ಇಂಜಿನಿಯರಿಂಗ್ | 54 | 47 |
| | | | 2.ಮೆಕ್ಯಾನಿಕಲ್ ಇಂಜಿನಿಯರಿಂಗ್ | 54 | 57 |
| | | | 3.ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ | 54 | 57 |
| | | | 4.ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿನಿಯರಿಂಗ್ | 54 | 55 |

ಮೇಲ್ಕಂಡ ಇಂಜಿನಿಯರಿಂಗ್/ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಸಿಂಧನೂರು ತಾಲ್ಲೂಕಿನ ವಿದ್ಯಾರ್ಥಿಗಳು ವ್ಯಾಸಂಗ ಮಾಡಬಹುದಾಗಿದೆ.

ಈಗಾಗಲೇ ಕರ್ನಾಟಕದಲ್ಲಿ ಸರ್ಕಾರದ ವತಿಯಿಂದ 17 ಇಂಜಿನಿಯರಿಂಗ್ ಕಾಲೇಜು ಹಾಗೂ ಖಾಸಗಿ ವಲಯದ ಸುಮಾರು 205 ಕಾಲೇಜುಗಳಿದ್ದು, ಎಲ್ಲಾ ಕಾಲೇಜುಗಳಲ್ಲಿ ವಿವಿಧ ಕೋರ್ಸುಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 87881 ಆಗಿರುತ್ತದೆ.

2025-26ನೇ ಸಾಲಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಮತ್ತು ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಟ್ಟು 1,16,866 ಸೀಟುಗಳು ಲಭ್ಯವಿದ್ದು,(ಖಾಸಗಿ ವಿಶ್ವವಿದ್ಯಾಲಯ ಹೊರತುಪಡಿಸಿ) ಈ

ಪೈಕಿ 87881 ಸೀಟುಗಳು ಮಾತ್ರ ಭರ್ತಿಯಾಗಿರುತ್ತವೆ. ಉಳಿಕೆ 28985 ಸೀಟುಗಳು ಭರ್ತಿಯಾಗದೆ ಖಾಲಿ ಇರುತ್ತವೆ.

ಕೆಇಎ ನಡೆಸುವ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶ ಪ್ರಕ್ರಿಯೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಕಾಲೇಜುಗಳ ಪ್ರತಿ ಕೋರ್ಸ್‌ನಲ್ಲಿ ಲಭ್ಯವಿರುವ ಸರ್ಕಾರಿ ಕೋಟದ ಶೇಕಡಾ 70ರಷ್ಟು ಸೀಟುಗಳನ್ನು ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಡಲಾಗುತ್ತದೆ. ಕಲ್ಯಾಣ ಕರ್ನಾಟಕ ಪ್ರದೇಶದ ಹೊರಗಿನ ಕಾಲೇಜುಗಳ ಸರ್ಕಾರಿ ಕೋಟಾದ ಶೇಕಡಾ 8ರಷ್ಟು ಸೀಟುಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳಿಗೆ ಮೀಸಲಿಡಲಾಗಿದೆ.

ರಾಜ್ಯದಲ್ಲಿ ಒಟ್ಟು 120 ಸರ್ಕಾರಿ ಪಾಲಿಟೆಕ್ನಿಕ್ ಮಂಜೂರಾಗಿದ್ದು, 2026-27ನೇ ಸಾಲಿನಲ್ಲಿ 117 ಪಾಲಿಟೆಕ್ನಿಕ್ ಗಳು ಕಾರ್ಯನಿರ್ವಹಿಸುತ್ತಿವೆ. ಉಳಿದಂತೆ 03 ಪಾಲಿಟೆಕ್ನಿಕ್ ಗಳ ಕಟ್ಟಡ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಸರ್ಕಾರಿ ಪಾಲಿಟೆಕ್ನಿಕ್, ಕಾಗವಾಡ, ಬೆಳಗಾವಿ ಜಿಲ್ಲೆ ಸಂಸ್ಥೆಯ ಕಾಮಗಾರಿಯು ಶೇ.50ರಷ್ಟು, ಸರ್ಕಾರಿ ಪಾಲಿಟೆಕ್ನಿಕ್, ಮಾಗಡಿ, ಬೆಂಗಳೂರು ದಕ್ಷಿಣ ಜಿಲ್ಲೆ ಸಂಸ್ಥೆಯ ಕಾಮಗಾರಿಯು ಶೇ.80ರಷ್ಟು ಹಾಗೂ ಸರ್ಕಾರಿ ಪಾಲಿಟೆಕ್ನಿಕ್, ಟಿ.ನರಸೀಪುರ, ಮೈಸೂರು ಜಿಲ್ಲೆ ಸಂಸ್ಥೆಯ ಕಾಮಗಾರಿಯು ಶೇ.20ರಷ್ಟು ಪೂರ್ಣಗೊಂಡಿರುತ್ತದೆ.

ರಾಜ್ಯದಲ್ಲಿ 2025-26ನೇ ಸಾಲಿನಲ್ಲಿ 109 ಸರ್ಕಾರಿ ಪಾಲಿಟೆಕ್ನಿಕ್‌ಗಳು, 43 ಅನುದಾನಿತ ಮತ್ತು 135 ಖಾಸಗಿ ಪಾಲಿಟೆಕ್ನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ಕಾಲೇಜುಗಳಲ್ಲಿ ಒಟ್ಟು 72057 ಪ್ರವೇಶಾತಿಗೆ ಅವಕಾಶವಿದ್ದು, 46136 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, 25921 ಸೀಟುಗಳು ಖಾಲಿ ಉಳಿದಿರುತ್ತವೆ.

ಪ್ರಸ್ತುತ ಜಾರಿಯಲ್ಲಿರುವ ಎಐಸಿಟಿಇ ನಿಯಮಾಳಿಗಳ ಪ್ರಕಾರ ಈಗಾಗಲೇ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ಎಐಸಿಟಿಇ ಮಾರ್ಗಸೂಚಿಗಳನ್ವಯ ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಬಲವರ್ಧನೆಗೊಳಿಸಲು ಕ್ರಮವಹಿಸಲಾಗುತ್ತಿದೆ.

ಆದ್ದರಿಂದ, ಸಿಂಧನೂರು ತಾಲ್ಲೂಕಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್ ಕಾಲೇಜನ್ನು ಹೊಸದಾಗಿ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಗಣನೆಯಲ್ಲಿ ಇರುವುದಿಲ್ಲ.

ಕಡತ ಸಂಖ್ಯೆ: ಇಡಿ 93 ಹೆಚ್‌ಪಿಟಿ 2026)

(ಬಸವರಾಜ ರಾಯರಡ್ಡಿ)
ಉನ್ನತ ಶಿಕ್ಷಣ ಸಚಿವರು